**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ಮೂಡಿಗೆರೆ**

ಸಿ.ಸಿ.**ನಂ:1468: 2023**

ಪಿರ್ಯಾದುದಾರರು : ರಾಜ್ಯದ ಪರವಾಗಿ ಬಣಕಲ್ ಪೋಲೀಸರು

ವಿರುದ್ಧ

ಆರೋಪಿತರು :

1. ಅಣ್ಣಪ್ಪ ಬಿನ್ ಪೆರ್ನಮೇಸ್ತ್ರಿ,
   ವಯಸ್ಸು ಸುಮಾರು 71 ವರ್ಷ,
   ವಾಸಃ ದೊಡ್ಡಳ್ಳ ಬಿ. ಹೊಸಹಳ್ಳಿ ಗ್ರಾಮ,
   ಮೂಡಿಗೆರೆ ತಾಲ್ಲೂಕು.

2. ದರಣಮ್ಮ ಕೋಂ ಅಣ್ಣಪ್ಪ,
   ವಯಸ್ಸು ಸುಮಾರು 61 ವರ್ಷ,
   ವಾಸಃ ದೊಡ್ಡಳ್ಳ ಬಿ. ಹೊಸಹಳ್ಳಿ ಗ್ರಾಮ,
   ಮೂಡಿಗೆರೆ ತಾಲ್ಲೂಕು.

3. ಶಬರೀಶ್ ಬಿನ್ ಪೂವಪ್ಪ,
   ವಯಸ್ಸು ಸುಮಾರು 28 ವರ್ಷ,
   ವಾಸಃ ಚಂದವಳ್ಳಿ ಕೂವೆ ಗ್ರಾಮ,
   ಮೂಡಿಗೆರೆ ತಾಲ್ಲೂಕು.

4. ಅಶೋಕ್ ಡಿ. ಎ. ಬಿನ್ ಅಣ್ಣಪ್ಪ,
   ವಯಸ್ಸು ಸುಮಾರು 30 ವರ್ಷ,
   ವಾಸಃ ದೊಡ್ಡಳ್ಳ ಬಿ. ಹೊಸಹಳ್ಳಿ ಗ್ರಾಮ,
   ಮೂಡಿಗೆರೆ ತಾಲ್ಲೂಕು.

5. ಅಮೀತ ಡಿ.ಎ. ಬಿನ್ ಅಣ್ಣಪ್ಪ,
ವಯಸ್ಸು ಸುಮಾರು 34 ವರ್ಷ,
ವಾಸಃ ದೊಡ್ಡಳ್ಳ ಬಿ. ಹೊಸಹಳ್ಳಿ ಗ್ರಾಮ,
ಮೂಡಿಗೆರೆ ತಾಲ್ಲೂಕು.

6. ಹರಿಣಾಕ್ಷಿ ಡಿ.ಎ. ಬಿನ್ ಅಣ್ಣಪ್ಪ,
ವಯಸ್ಸು ಸುಮಾರು 32 ವರ್ಷ,
ವಾಸಃ ದೊಡ್ಡಳ್ಳ ಬಿ. ಹೊಸಹಳ್ಳಿ ಗ್ರಾಮ,
ಮೂಡಿಗೆರೆ ತಾಲ್ಲೂಕು.

## ದೋಷಾರೋಪಣೆ

ಶ್ರೀ ವಿಶ್ವನಾಥ್ ಎ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

1. ದಿನಾಂಕಃ 20.04.2023 ರಂದು ಸುಮಾರು 5.00 ಗಂಟೆ ಸಮಯದಲ್ಲಿ ಮೂಡಿಗೆರೆ ತಾಲ್ಲೂಕು, ಬಿ.ಹೊಸಹಳ್ಳಿ ಗ್ರಾಮದ ಚಾಸಾ-1 ಮುದ್ದು ಮತ್ತು ಚಾಸಾ-2 ಪ್ರೇಮ ರವರು ಅವರ ಸ್ವಾದೀನದಲ್ಲಿರುವ ಸರ್ವೆ ನಂ.255 ರಲ್ಲಿ ಸಾರ್ವಜನಿಕರಿಗೆ ತಿರುಗಾಡಲು ಬಿಟ್ಟಿದ್ದ 8 ಅಡಿ ರಸ್ತೆಗೆ ದನಗಳು ಬಂದು ಬೆಳೆದ ಪೈರನ್ನು ತಿಂದು ಹಾಳು ಮಾಡುತ್ತವೆ ಎಂದು ಬೇಲಿ ಹಾಕಿಸಿ ಅದರಲ್ಲಿ ಸಾರ್ವಜನಿಕರು ತಿರುಗಾಡಲು ತೊಂದರೆ ಆಗದಂತೆ 4 ಅಡಿ ರಸ್ತೆಗೆ ಬಿದಿರು ಗೇಟು ಮಾಡಿದ್ದ ವಿಚಾರದಲ್ಲಿ ಸಂಜೆ 7.00 ಗಂಟೆ ಸಮಯದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಅಪರಾಧ ಮಾಡುವ

ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಕಾಡು ಜಾತಿಯ ದೊಣ್ಣೆಯಂತಹ ಮಾರಕಾಸ್ತ್ರಗಳನ್ನು ಇಟ್ಟುಕೊಂಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಮುಂದುವರೆದು, ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಮುಂದುವರೆದು, 1 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-1 ರವರ ಎಡಕಿವಿಗೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ

ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಮುಂದುವರೆದು, 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಬಿಗಿಯಾಗಿ ಹಿಡಿದುಕೊಂಡಾಗ 5 ನೇ ಆರೋಪಿಯಾದ ನೀವು ಕಾಡುಜಾತಿಯ ದೊಣ್ಣೆಯಿಂದ ಚಾಸಾ-1 ರವರ ಬಲಗಾಲಿಗೆ ಮತ್ತು ಎಡಕೈಗೆ ಹೊಡೆದಿದ್ದು ನಂತರ ಜಗಳ ಬಿಡಿಸಲು ಬಂದ ಚಾಸಾ-2 ರವರನ್ನು 2 ನೇ ಆರೋಪಿಯಾದ ನೀವು ಬಿಗಿಯಾಗಿ ಹಿಡಿದುಕೊಂಡಿದ್ದು, 5 ಮತ್ತು 6 ನೇ ಆರೋಪಿತರಾದ ನೀವು ದೊಣ್ಣೆಯಿಂದ ಚಾಸಾ-2 ರವರ ಬೆನ್ನಿಗೆ ಹಾಗೂ ಕುತ್ತಿಗೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಮುಂದುವರೆದು, ಚಾಸಾ-1 ರವರನ್ನು ಉದ್ದೇಶಿಸಿ ಇನ್ನೊಂದು ಬಾರಿ ಬೇಲಿ ಹಾಕಿದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾ.ದಂ.ಸಂ.ಕಲಂ.506**

**ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ರಿಂದ 6 ನೇ ಆರೋಪಿತರ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ರಿಂದ 6 ನೇ ಆರೋಪಿತರ ಉತ್ತರಃ

*(ಆರೋಪಿತರಿಗೆ ದಿನಾಂಕ 06.12.2023 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ).*

SD/-

ಮೂಡಿಗೆರೆ

ದಿನಾಂಕಃ 06.12.2023

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.